ಬಹುಶ: ಅವರು ಡೆಫಿನಿಷನ್‌ನ್ನು ಜನರಸ್ ಆಗಿ ಮಾಡಿದರೆ ಇನ್ನೂ ಹೆಚ್ಚಿನ ಅನುಕೂಲ ಸ್ಮಾಲ್ ಫಾರ್ಮರ್ಸ್‌ಗೆ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಟೋಟಲ್ ಫಾರ್ಮರ್ಸ್ ಸಂಖ್ಯೆಯನ್ನು ನಾನು ಹೇಳಿದೆ. ಕೊನೆಗೆ ನಾನು ಹೆಚ್ಚು ಮಾತನಾಡದೇ ಹೆಚ್ಚು ಹೇಳುವುದಕ್ಕೆ ಹೋಗದೆ ಇಷ್ಟು ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಸಮಸ್ಯೆಯನ್ನು ರಾಜಕೀಯ ಸಮಸ್ಯೆಯನ್ನಾಗಿ ಮಾಡುವುದು ಬೇಡ. ಅದಕ್ಕಾಗಿ ನಾನು ಒಪ್ಪಿಕೊಂಡೆ. ಅವರು ನ್ಯಾಷನಲ್ ಕಾನ್‌ಸೆನ್‌ಸಸ್ ಎವಾಲ್ವ್ ಮಾಡಬೇಕು ಎಂದು ಹೇಳಿದರು. ಆ ಮಾತು ಬೇರೆ. ಸಾಲ ಮನ್ನಾ ಮಾಡುವುದು, ಮುಂದೆ ಸಾಲ ಕೊಡದಿರುವುದು, ಮಾಡುವುದು ಮುಟ್ಟುವುದರ ಬಗ್ಗೆ ವಿರೋಧ ಪಕ್ಷದ ನಾಯಕರು, ನನ್ನಿಂದ, ನನ್ನ ಪಕ್ಷದಿಂದ ಏನು ಸಹಕಾರ ಬೇಕೋ ಅದನ್ನು ನಾನು ಕೊಡುವುದಕ್ಕೆ ತಯಾರಾಗಿದ್ದೇನೆ ಎಂದು ಹೇಳಿದ್ದಾರೆ. ಬಹಳ ಸಂತೋಷದಿಂದ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಮತ್ತು ಅವರಿಗೆ ನನ್ನ ಪರವಾಗಿ, ನನ್ನ ಸರಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕೇಂದ್ರ ಸರಕಾರದವರು ರೈತರಿಗೆ ಸಾಲ ಮನ್ನಾ ಮಾಡಿದ್ದನ್ನಾಗಲೀ, ಯಾವ ರಿಲೀಫ್ ಕೊಟ್ಟರೂ ಸರಕಾರದ ಖಜಾನೆಗೆ ಒಂದು ಪೈಸೆ ಹೋಗಲಾರದ ರೀತಿ ಎಲ್ಲಾ ರಿಲೀಫ್ ರೈತರಿಗೆ ಮುಟ್ಟುವಂಥ ವ್ಯವಸ್ಥೆ ನಾನು ಮಾಡುತ್ತೇನೆ. ಇದರಲ್ಲಿ ಕಮೀಷನ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಪ್ರತಿಯೊಂದು ಪೈಸೆ ಅವರಿಗೆ ಮುಟ್ಟಬೇಕೇ ಹೊರತಾಗಿ ನಮ್ಮ ರಾಜ್ಯದ ಟ್ರಜರಿಗೆ ಒಂದು ನಯಾಪೈಸೆ ಬರಬಾರದು ಎನ್ನುವಂಥ ವ್ಯವಸ್ಥೆ ನಾನು ಮಾಡುತ್ತೇನೆ. ಕೊನೆಗೆ ಅವರು ಏನು ಒಂದು ಸಹಕಾರದ ಗೆಸ್ಚರ್ ತೋರಿಸಿದ್ದಾರೆ, ಅದಕ್ಕೆ ನಾನು ಕೃತಜ್ಞತೆಯನ್ನು ಅರ್ಪಿಸಿ. ನಾನು ಇಷ್ಟೆ ವಿನಂತಿ ಮಾಡಿ ಮಾಡಿಕೊಳ್ಳುತ್ತೇನೆ. ರೈತರ ಸಮಸ್ಯೆ ಜಟಿಲವಾದಂಥ ಸಮಸ್ಯೆ ಈ ಸಮಸ್ಯೆಯಮ್ನ ಬಿಡಿಸುವುದಕ್ಕೆ ತಾವು ಏನು ನನಗೆ ಸಹಕಾರ ನೀಡುತ್ತೇನೆಂದು ಹೇಳಿದಿರಿ, ಇವತ್ತೇ ನಾನು ಈಸದನದಲ್ಲಿ ಘೋಷಣೆಯನ್ನು ಮಾಡುತ್ತೇನೆ. I am prepared to lead an All-party Delegation to the Government of India to meet the Finance Minister and the Prime-Minister to impress upon them the urgent need of issuing a directive to NABARD not to insist on recovery and also not to put any hurdles in refinancing our agriculturists who are entirely depending upon the co-operative financing. ನಾನು ತಯಾರು ಇದ್ದೇನೆ. ತಾವು ಯಾವಾಗ ಹೇಳಿ ಅವತ್ತಿನ ದಿವಸ ನನ್ನ ನಾಯಕತ್ವದಲ್ಲಿ ಎಲ್ಲಾ ಪಕ್ಷಗಳ ಡೆಲಿಗೇಷನ್ ಅನ್ನು ಡೆಲ್ಲಿಗೆ ತೆಗೆದುಕೊಂಡು ಹೋಗೋಣ, ಡೆಲ್ಲಿಯಲ್ಲಿ ಅವರ ಜೊತೆಯಲ್ಲಿ ಚರ್ಚೆ ಮಾಡೋಣ, ಮತ್ತು ನಿಮ್ಮಿಂದ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಅವರ ಮೇಲೆ ಪ್ರಭಾವ ತನ್ನಿ. ನಿಮ್ಮಿಂದ ಎಷ್ಟು ಸಾಧ್ಯವಾಗುತ್ತದೊ ಅಷ್ಟು ನಾವೂ ಪ್ರಭಾವವನ್ನು ತರೋಣ. ಆ ರೀತಿಯಾಗಿ ಮಾಡಿ ನಮ್ಮ ಕರ್ನಾಟಕ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡೋಣ. ಇದನ್ನು ಪಕ್ಷಾತೀತವಾದ ಪ್ರಶ್ನೆ ಮಾಡಿ, ಕರ್ನಾಟಕ ರಾಜ್ಯದ ರೈತರಿಗೆ ಈ ಒಂದು ಪರಿಹಾರವನ್ನು ಒದಗಿಸಿದೆ ಎನ್ನುವಂಥ ಕೀರ್ತಿ ನೀವು ತೆಗೆದುಕೊಳ್ಳಿ, ಸರ್ಕಾರಕ್ಕೂ ಕೊಡಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹಾರಿಕೆ ಉತ್ತರ ಕೊಟ್ಟಿದ್ದನ್ನು ಪ್ರತಿಭಟಿಸಿ ಬಿ.ಜೆ.ಪಿ. ಸದಸ್ಯರು ವಾಕ್‌ಔಟ್ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು—ಸಭಾತ್ಯಾಗ ಮಾಡುವವರನ್ನು ಬಲವಂತ ಮಾಡಿಬೇಡಿ. ಸಭಾತ್ಯಾಗ ಮಾಡುವವರು ಸಭಾತ್ಯಾಗ ಮಾಡಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಒಂದೆರೆಡು ಕ್ಲಾರಿಫಿಕೇಷನ್ಸ್ ಕೇಳಬೇಕಾಗಿದೆ, ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಂಶಯವನ್ನು ವ್ಯಕ್ತ ಮಾಡಿದರು. ವಿರೋಧ ಪಕ್ಷದ ನಾಯಕರು ಹೇಳಿದ ಮಾತನ್ನೇ ಚರ್ಚೆಗೆ ತೆಗೆದುಕೊಂಡರು ಎಂದು ಹೇಳಿದರು. ನಾನು ಅದಕ್ಕಾಗಿ ಪ್ರಾರಂಭಿಕವಾಗಿ ಒಂದು ಮಾತನ್ನು ಹೇಳಿದೆ. ಅವೇನೆಂದರೆ this is a state sponsored confusion. ಎಂದು. ಅದಕ್ಕಾಗಿ ನಾನು ಚರ್ಚೆಗೆ ತೆಗೆದುಕೊಳ್ಳಬೇಕಾಯಿತು. ಇಲ್ಲದೇ ಹೆದ್ದರ ನಾನು ಚರ್ಚೆಗೆ ಹೋಗುತ್ತಿರಲಿಲ್ಲ. 'State Sponsored Confusion' ಏನು ಎಂದು ಇಳಿದ್ದೇನೆ. ಆ ಮೇಲೆ ನೀವು ರಾಜಕೀಯ ಮಾಡಿದ್ದೀರಿ ಎಂದು ನಾನು ಹೇಳುವುದಕ್ಕೆ ಕಾರಣ,